ಶ್ರೀ ಎಸ್.ಆರ್. ಅಂಬಡಗಟ್ಟಿ:- ಮಕ್ಕಳ ಶಿಕ್ಷಣ ಸರಿಯಾಗಿ ನಡೆಯುತ್ತಾ ಇದ್ದರೂ, ಕೆಲವು ಖಾಸಗಿ ಸಂಸ್ಥೆಗಳವರು ಶಾಲೆಯನ್ನು ಒಂದೆರಡು ವರ್ಷಗಳ ಕಾಲ ನಡೆಸಿ ಬಿಟ್ಟುಬಿಟ್ಟರೆ ಏನು ಮಾಡುತ್ತೀರಿ? ಸರಕಾರ ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತದೆ?

ಅಧ್ಯಕ್ಷರು:- ಸಚಿವ ಸಂಪುಟದ ಉಪ-ಸಮಿತಿಯು ಇದೆ. ಅಲ್ಲಿ ಈ ವಿಚಾರಗಳನ್ನು ತೀರ್ಮಾನ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ಎಸ್‌ಸಿ/ಎಸ್‌ಟಿ ಜನರ ಅಭಿವೃದ್ಧಿಗೋಸ್ಕರವಾಗಿ ಇಂಥ ಸಮಸ್ಯೆಗಳು ಹುಟ್ಟಿ ಅಂಥವರು ಶಾಲೆಗಳನ್ನು ನಡೆಸುತ್ತಾ ಇದ್ದರೆ ಅವರಿಗೆ ಅನುದಾನವನ್ನು ಕೊಡಬೇಕು. ಆದರೆ ವಾಸ್ತವವಾಗಿ ಅವರ ಹೆಸರಿನಲ್ಲಿ ಬೇರೆಯವರು ಶಾಲೆಗಳನ್ನು ನಡೆಸುತ್ತಾ ಇದ್ದಾರೆ. ಉದಾಹರಣೆಗೆ ಗುಲ್ಬರ್ಗದವರು ಸಾಗರಕ್ಕೆ ಬಂದು ಒಂದು ಸಂಸ್ಥೆಯನ್ನು ನಡೆಸುತ್ತಾರೆ ಅಂದರೆ ಹೇಳಿಕೊಳ್ಳಲು ನಾಚಿಕೆಯಾಗುತ್ತದೆ.

ಶ್ರೀ ವಸಂತ ವಿ. ಸಾಲಿಯಾನ್:- ಜಿಲ್ಲಾ ಪಂಚಾಯತ್‌ಗಳವರು ಕರ್ನಾಟಕ ರಾಜ್ಯದಲ್ಲಿ '06 ಹೈಸ್ಕೂಲ್‌ಗಳಿಗೆ ಪರ್ಮಿಷನ್ ಕೊಟ್ಟಿದ್ದಾರೆ. ಅವುಗಳು ಅನುದಾನ ಸಹಿತ ಶಾಲೆಗಳು ಎಂದು ಆರ್ಡರ್ ಇದೆ. ಆದರೆ ಅವರಿಗೆ ಇನ್ನೂ ಯಾವ ಅನುದಾನವೂ ಸಿಕ್ಕಿಲ್ಲ. ನಮ್ಮ ಕಳಕಳಿ ಇಷ್ಟೆ.. ಅಂಥವರು 9 ವರ್ಷಗಳಿಂದ ಶಾಲೆಗಳನ್ನು ನಡೆಸುತ್ತಾ ಇದ್ದಾರೆ. ಆದರೆ ಅವರಿಗೆ ಸಿಬ್ಬಂದಿಗಳಿಗೆ ವೇತನ ಕೊಡಲು ಹಣವಿಲ್ಲ ಎಂದು ಹೇಳುತ್ತಾ ಇದ್ದಾರೆ. ಅಂಥ ಶಾಲೆಗಳಿಗೆ ಅನುದಾನವನ್ನು ಕೊಡಬೇಕು. ಏತಕ್ಕೆಂದರೆ ಕೆಲವು ಹಳ್ಳಿಗಳಲ್ಲಿ ಒಂದು ಹೈಸ್ಕೂಲ್ ಕೂಡ ಇಲ್ಲ.

ಶ್ರೀ ಎಸ್.ಆರ್. ಅಂಬಡಗಟ್ಟಿ:- ಆಗ ಛಾಪಾ ಕಾಗದದ ಮೇಲೆ ಶಾಶ್ವತ ಅನುದಾನ ರಹಿತ ಎಂದು ಬರೆದು ತೆಗೆದುಕೊಂಡಿದ್ದಾರೆ....

MR. SPEAKER:- I am sorry, I do not went to disoblige you. We have gone too far...

ವಿಷಯ:- ಧಾರವಾಡ ಜಿಲ್ಲೆಯಲ್ಲಿ 1995-1996 ಕೊರೆದಿರುವ ಕೊಳವೆ ಬಾವಿಗಳು.

14(213)

ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ ಸಿಟಿ):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ 1995-96ನೇ ಸಾಲಿನಲ್ಲಿ ಕೊರೆದಿರುವ ಕೊಳವೆಬಾವಿಗಳೆಷ್ಟು? ಅವುಗಳಿಗೆ ಮಾಡಿರುವ ಖರ್ಚೆಷ್ಟು? ಅತೀ ಹೆಚ್ಚಿಗೆ ಮತ್ತು ಅತೀ ಕಡಿಮೆ ಖರ್ಚು ಮಾಡಿದ ಜಿಲ್ಲೆಗಳಾವುವು;

ಆ) ಧಾರವಾಡ ಜಿಲ್ಲೆಯಲ್ಲಿ 1995-96ನೇ ಸಾಲಿನಲ್ಲಿ ಸರ್ಕಾರ ಕೊರೆದ ಕೊಳವೆ ಬಾವಿಗಳಲ್ಲಿ ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪ್‌ಸೆಟ್‌ಗಳನ್ನು ಜೋಡಿಸಲಾಗಿದೆ ಹಾಗೂ ಅದಕ್ಕೆ ತಗುಲಿದ ವೆಚ್ಚ ಎಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು)?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು):-

ಅ) ರಾಜ್ಯದಲ್ಲಿ 1995-96ನೇ ಸಾಲಿನಲ್ಲಿ 8874 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಅವುಗಳಿಗಾಗಿ ಮಾಡಿರುವ ವೆಚ್ಚ ರೂ. 2218.50 ಲಕ್ಷಗಳು. ಈ ಸಲುವಾಗಿ ಹಾಸನ ಜಿಲ್ಲಾ ಪಂಚಾಯತ್‌ನಲ್ಲಿ ಅತೀ ಹೆಚ್ಚಿನ ಮತ್ತು ಕೊಡಗು ಜಿಲ್ಲಾ ಪಂಚಾಯತ್‌ನಲ್ಲಿ ಅತೀ ಕಡಿಮೆ ವೆಚ್ಚವಾಗಿರುತ್ತದೆ.

ಆ) ಧಾರವಾಡ ಜಿಲ್ಲೆಯಲ್ಲಿ 1995-96ನೇ ಸಾಲಿನಲ್ಲಿ ಒಟ್ಟು ಕೊರೆಯಲಾದ 400 ಕೊಳವೆ ಬಾವಿಗಳ ಪೈಕಿ 129 ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪ್‌ಸೆಟ್ ಅಳವಡಿಸಲಾಗಿದೆ. ಇದಕ್ಕೆ ತಗಲಿದ ಒಟ್ಟು ವೆಚ್ಚ ರೂ. 47.08 ಲಕ್ಷಗಳು. (ತಾಲ್ಲೂಕುವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ).

ಅನುಬಂಧ-1

ಕ್ರಮ ಸಂಖ್ಯೆ	ತಾಲ್ಲೂಕು	ವಿದ್ಯುತ್ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿರುವ ಕೊಳವೆ ಬಾವಿಗಳ ಸಂಖ್ಯೆ	ವೆಚ್ಚ (ರೂ.ಗಳಲ್ಲಿ)
1	2	3	4
1.	ಧಾರವಾಡ	8	2.62
2.	ಹುಬ್ಬಳ್ಳಿ	2	0.56
3.	ಕಲಘಟಗಿ	5	4.39
4.	ಕುಂದಗೋಳ	2	2.45
5.	ಶಿಗ್ಗಾಂವ್	–	–
6.	ಹಾವೇರಿ	22	6.95
7.	ಹಾನಗಲ್	20	6.35
8.	ಹಿರೇಕೆರೂರ್	16	4.73
9.	ರಾಣಿಬೆನ್ನೂರ್	18	6.16
10.	ಬ್ಯಾಡಗಿ	11	3.88
11.	ಸವಣೂರು	8	2.73
12.	ಗದಗ್	4	1.43

1	2	3	4
13.	ಮುಂಡರಗಿ	-	-
14.	ನರಗುಂದ	1	0.41
15.	ನವಲಗುಂದ	5	1.68
16.	ರೋಣ	4	1.60
17.	ಶಿರಹಟ್ಟಿ	3	1. 14
	ಒಟ್ಟು	129	47.08

ಶ್ರೀ ಆಶೋಕ್ ಕಾಟವೆ:- ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಯಾವ ಜಿಲ್ಲೆಯಲ್ಲಿ ಹೆಚ್ಚಿಗೆ ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ ಎಂದು ಕೇಳಿದ್ದಕ್ಕೆ ಮಾನ್ಯ ಸಚಿವರು ಹಾಸನ ಜಿಲ್ಲೆಯಲ್ಲಿ ಅತಿ ಹೆಚ್ಚು ಕೊಳವೆಬಾವಿಗಳನ್ನು ಕೊರೆಯಲಾಗಿದೆ ಎಂದು ಹೇಳಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ 400 ಕೊಳವೆಬಾವಿಗಳನ್ನು ಕೊರೆಯಲಾಗಿದೆ ಎಂದು ಹೇಳಿದ್ದಾರೆ. ಅವುಗಳಲ್ಲಿ 129 ಕೊಳವೆಬಾವಿಗಳಿಗೆ ವಿದ್ಯುತ್‌ಪಂಪ್‌ಸೆಟ್‌ನ್ನು ಅಳವಡಿಸಲಾಗಿದೆ ಎಂದು ಹೇಳಿದ್ದಾರೆ. ಉತ್ತರ ಕರ್ನಾಟಕ ಭಾಗದಲ್ಲಿ ತೋಡಿಸಿದ ಕೊಳವೆಬಾವಿಗಳ ವಿವರವನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಹಾನಗಲ್ 20, ಹಾವೇರಿ 22, ಹುಬ್ಬಳ್ಳಿಯಲ್ಲಿ ಕೇವಲ ಎರಡನ್ನು ಮಾತ್ರ ಮಾಡಿದ್ದಾರೆ. ಇಲ್ಲಿ ತಾರತಮ್ಯ ಮಾಡಿರುವುದು ಕಾಣುತ್ತದೆ. ಒಂದು ಕಡೆಯಲ್ಲಿ ಹೆಚ್ಚು ಇನ್ನೊಂದು ಕಡೆಯಲ್ಲಿ ಏತಕ್ಕಾಗಿ ಕಡಿಮೆ ಮಾಡಿದ್ದೀರಿ? ಬೇರೆ ಕಡೆಗಳಿಂದ ಅರ್ಜಿಗಳು ಬಂದಿಲ್ಲವೆ ಎಂಬುದನ್ನು ತಿಳಿಸಿರಿ.

ಶ್ರೀ ಎಂ.ಪಿ. ಪ್ರಕಾಶ್:- ಧಾರವಾಡ ಜಿಲ್ಲೆಯಲ್ಲಿನ 400 ಕೊಳವೆಬಾವಿಗಳ ಪೈಕಿ 129 ಬಾವಿಗಳಿಗೆ ವಿದ್ಯುತ್‌ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿದೆ. ಕೆಲವು ಕಡೆಗಳಲ್ಲಿ ಕೈಪಂಪುಗಳನ್ನು ಅಳವಡಿಸಿದ್ದಾರೆ. ಪಂಪ್‌ಸೆಟ್‌ಗಳನ್ನು ಮಿನಿವಾಟರ ಸಪ್ಲೈ ಸ್ಕೀಮ್‌ಗಳು ಇದ್ದಾಗ ಮಾತ್ರ ಕೊಡುತ್ತೇವೆ. ಉಳಿದಿರತಕ್ಕಂಥ ಸಂದರ್ಭಗಳಲ್ಲಿ ಕೈಪಂಪುಗಳನ್ನು ಅಳವಡಿಸಲಾಗುತ್ತದೆ. ಅಂಥ ಕಡೆಗಳಲ್ಲಿ ವಿದ್ಯುತ್ ಪಂಪ್‌ಸೆಟ್‌ನ ಅವಶ್ಯಕತೆಯೂ ಇರುವುದಿಲ್ಲ. ತಮಗೆ ಒದಗಿಸಿದ ಉತ್ತರದಲ್ಲಿ ಬೇರೆ ಬೇರೆ ತಾಲ್ಲೂಕುಗಳು ವಿವರಗಳನ್ನು ಕೊಟ್ಟಿದ್ದೇನೆ. ಇವುಗಳನ್ನು ಆದ್ಯತೆಯ ಮೇರೆಗೆ ಕೊಟ್ಟಿದ್ದೇವೆ.

ಶ್ರೀ ಎಸ್.ಆರ್. ಅಂಬಡಗಟ್ಟಿ:- ನಮ್ಮ ಭಾಗದಲ್ಲಿನ 20 ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಅವುಗಳಿಗೆ ಕೊಡದೇ ತಾರತಮ್ಯ ಮಾಡಿ ಕೆಲವು ಕಡೆಗಳಲ್ಲಿ ಒಂದು ತಾಲ್ಲೂಕಿಗೆ 20 ಕೊಟ್ಟಿದ್ದಾರೆ. ಧಾರವಾಡಕ್ಕೆ ಕೇವಲ 8 ಮಾತ್ರ ಕೊಟ್ಟಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್:- ಹಾವೇರಿ 22, ಹಿರೇಕೆರೂರು 16 ರಾಣೆಬೆನ್ನೂರು 18, ಬ್ಯಾಡಗಿ 11 ಕೊಟ್ಟಿದ್ದೇವೆ. ಉಳಿದ ಕಡೆಗಳಲ್ಲಿ ಒಟ್ಟು 400ರ ಪೈಕಿ ಕೆಲವು ಕಡೆಗಳಲ್ಲಿ ಕೈಪಂಪುಗಳನ್ನು ಅಳವಡಿಸಲಾಗಿದೆ. ಮಾನ್ಯ ಸದಸ್ಯರು ಹೇಳಿದಂತೆ ಕುಡಿಯುವ ನೀರಿನ ತೊಂದರೆ ಇರುವ ಕಡೆಗಳಲ್ಲಿ ಕುಡಿಯುವ ನೀರಿನ ಅನುಕೂಲತೆಯನ್ನು ಮಾಡಲು ಕ್ರಮವನ್ನು ಜರುಗಿಸುತ್ತೇವೆ.

ಅಧ್ಯಕ್ಷರು:- ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ವಿಷಯ:- ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ತೆರೆಯಲು ಅನುಸರಿಸುವ ಮಾನದಂಡ.

15(45)

ಶ್ರೀ ಡಿ.ಆರ್. ಪಾಟೀಲ್ (ಗದಗ್):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ ಕನ್ನಡ ಹಾಗೂ ಉರ್ದು ಮಾಧ್ಯಮದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಓದುವ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ರಾಜ್ಯದಲ್ಲಿ ಇರುವ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಇ) ಈ ಶಾಲೆಗಳ ಸಂಖ್ಯೆ ಜಿಲ್ಲಾವಾರು ಪ್ರೌಢ ಶಾಲಾ ಮತ್ತು ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ ಯಾವ ಅನುಪಾತದಲ್ಲಿ ಇದೆ;

ಈ) ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ತೆರೆಯುವಲ್ಲಿ ಆಯಾ ಜಿಲ್ಲೆಗಳಲ್ಲಿ ಓದುವ ವಿದ್ಯಾರ್ಥಿ-ವಿದ್ಯಾರ್ಥಿನಿಯರುಗಳ ಸಂಖ್ಯೆಯ ದೃಷ್ಟಿಯಿಂದ ಏನಾದರೂ ತಾರತಮ್ಯವಿದೆಯೇ;

ಉ) ತಾರತಮ್ಯವಿದ್ದರೆ ಇನ್ನು ಮುಂದೆ ಸರ್ಕಾರಿ; ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ತೆರೆಯುವಾಗ ಈ ತಾರತಮ್ಯ ಹೋಗಲಾಡಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು? ಎಷ್ಟು ವರ್ಷಗಳಲ್ಲಿ ಈ ತಾರತಮ್ಯವನ್ನು ಹೋಗಲಾಡಿಸಲಾಗುವುದು.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ)		ವಿದ್ಯಾರ್ಥಿ	ವಿದ್ಯಾರ್ಥಿನಿಯರು
1.	ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ	3702915	3079397
	ಪ್ರೌಢ ಶಾಲೆ	896850	641650
2.	ಉರ್ದು ಮಾಧ್ಯಮ ಪ್ರಾಥಮಿಕ ಶಾಲೆ	229456	269809
	ಪ್ರೌಢ ಶಾಲೆ	19084	24749